# ಆರೋಹಣ

ಪ್ರತೀ ವರ್ಷದಂತೆ ಈ ವರ್ಷವೂ ಉಗಾದಿ ಕಳೆದ ವೈಶಾಖದ ಬಿರುಬಿಸಿಲಿನ ಎರಡು ದಿನಗಳಲ್ಲಿ ಬೆಳವಾಡಿಯ ಊರಹಬ್ಬ ಶುರುವಾಗಿತ್ತು. ಮೊದಲನೆಯ ದಿನ ಬಂಡಿಬಾನ ಮುಗಿದು, ಎರಡನೆಯ ದಿನ ಊರ ತುಂಬ ಊರ ದೇವತೆಗಳ ಮೆರವಣಿಗೆ, ಒಣಗಿದ ಕೆರೆಗೆ ಅಂಟಿಕೊಂಡಿದ್ದ ಬಯಲಿನಲ್ಲಿದ್ದ ದೇವಸ್ಥಾನಗಳ ಮುಂದೆ ಮೇಲೆ ಮದ್ಯಾಹ್ನದ ಉರಿಬಿಸಿಲಿನಲ್ಲಿ ಸಿಡಿ, ನಂತರ ಜಾತ್ರೆಯೂ ಮುಗಿಯುತ್ತ ಬಂದಿತ್ತು. ಎಂದಿನಂತೆ ಇವತ್ತು ರಾತ್ರಿಗೆ ಊರಿನವರೇ ತಾಲೀಮು ನಡೆಸಿದ್ದ ನಾಟಕ ಪ್ರದರ್ಶನ–"ರಾಜಾ ಸತ್ಯವ್ರತ" ಇತ್ತು. ಇವೆಲ್ಲದರ ಜೊತೆಗೆ ಈ ವರ್ಷ ಜಾತ್ರೆಯ ಬಯಲಿನಲ್ಲಿ ಸಂಜೆಯ ಹೊತ್ತಿಗೆ ಸಮ್ಮೋಹಿನಿ ವಿದ್ಯೆಯ ಪ್ರದರ್ಶನ ಎಂಬ ಪ್ರಚಾರ ಬೇರೆ ಎಲ್ಲರ ಕುತೂಹಲ ಕೆರಳಿಸಿತ್ತು.

ಬೆಳಿಗ್ಗೆಯಿಂದಲೂ ಡೋಲಿನವನೊಬ್ಬ ಮತ್ತು ಅಗಲವಾದ ಕೆಂಡದುಂಡೆಗಳಂತಿದ್ದ ಕಣ್ಣುಗಳ, ದಪ್ಪಮೀಸೆಯ, ಕೆಂಪು ರುಮಾಲಿನ, ಚಿತ್ರವಿಚಿತ್ರ ದಿರಿಸಿನ ವೃದ್ಧನೊಬ್ಬ ಇಡೀ ಬೆಳವಾಡಿಯ ಬೀದಿಬೀದಿಗಳನ್ನೂ, ಸಂದಿಗೊಂದಿಗಳನ್ನೂ ತಿರುಗಿ, ಡೋಲು ಬಾರಿಸಿ ಸಮ್ಮೋಹಿನಿ ಪ್ರದರ್ಶನದ ಪ್ರಚಾರ ನಡೆಸಿದ್ದರು.

ಅವರ ಪ್ರಚಾರದ ಫಲವೋ ಎಂಬಂತೆ ಯಾವ ವರ್ಷವೂ ಇರದಿದ್ದ ಇಂಥದೊಂದು ಪ್ರದರ್ಶನ ನೋಡಲಿಕ್ಕೆ ಇಡೀ ಊರಿನ ಜನವೆಲ್ಲ ಮೊದಲೇ ತಿಳಿದಿದ್ದಂತೆ ಸಂಜೆಯ ಹೊತ್ತಿಗೆ ಬಿಸಿಲಿಗೆ ಒಣಗಿ ಕಾವಲಿಯಾಗಿದ್ದ ದೊಡ್ಡ ಕೆರೆಯ ಅಂಚಿಗೇ ಇದ್ದ ಜಾತ್ರೆಯ ಬಯಲಿನಲ್ಲಿ ನೆರೆದರು. ಬಯಲಿನ ಮಧ್ಯದಲ್ಲಿ ಊರಿನ ಶಾಲೆಯಿಂದ ತರಿಸಿ ಹಾಕಿಸಿದ್ದ ಉದ್ದದ ಒಂದು ಬೆಂಚು, ಒಬ್ಬ ಡೋಲಿನವನು ಮತ್ತು ಆ ವೃದ್ಧ, ಇವಿಷ್ಟನ್ನೇ ನೋಡಿ ಇದೆಂತಾ ಆಟ ನಡೆದೀತು ಎಂದು ಆಶ್ಚರ್ಯದಿಂದ ಕುಳಿತು ಗುಸುಗುಸು ಮಾಡಲಾರಂಭಿಸಿದರು.

ಡೋಲಿನ ಶಬ್ದ ಶುರುವಾಯಿತು, ಜನರೆಲ್ಲ ಮೆಲ್ಲಮೆಲ್ಲನೆ ಮಾತು ನಿಲ್ಲಿಸಿ ಮೌನವಾದರು. ಕೊನೆಗೆ ಡೋಲಿನ ಶಬ್ದ ನಿಂತಾಗ ಕೆಂಪು ರುಮಾಲನ್ನು ಹಣೆಯ ಮೇಲಕ್ಕೆ ಎತ್ತಿ ಕಟ್ಟಿದ್ದ ವೃದ್ಧ ಯಕ್ಷಿಣಿಗಾರ ತನ್ನ ಕಂಚಿನ ಕಂಠದಲ್ಲಿ ದನಿಯೆತ್ತರಿಸಿ ಮಾತನಾಡಲಾರಂಭಿಸಿದ.

"ಮೊದಲಿಗೆ ಆಕಾಶದಲ್ಲಿ ನೆರೆದಿರತಕ್ಕಂತಹ ದೇವಾನುದೇವತೆಗಳಿಗೆಲ್ಲ ನನ್ನ ಶರಣು ಶರಣಾರ್ಥಿ. ಆಮೇಲೆ ಇಲ್ಲಿ ನೆರೆದಿರುವ ಎಲ್ಲ ಗುರುಹಿರಿಯರಿಗೂ ನನ್ನ ನಮಸ್ತೆ. ಎಲ್ಲ ಹೆಣ್ಣು ಮಕ್ಕಳಿಗೂ ನನ್ನ ಸಲಾಮ್. ಸಣ್ಣ ಸಣ್ಣ ಮಕ್ಕಳಿಗೆಲ್ಲ ಒಂದೊಂದು ಮಿಠಾಯಿ–ಮುತ್ತು." ವೃದ್ಧನ ಮಾತಿಗೆ, ಆತನ ದಪ್ಪ ಮೀಸೆಯ ಮುತ್ತೇ ತಾಕಿತೇನೋ ಎಂಬಂತೆ ಮಕ್ಕಳೆಲ್ಲ ಕಿಲಕಿಲ ನಕ್ಕರು.

"ಇವತ್ತು ನಾನು ತೋರಿಸ್ತಾ ಇರೋದು ಅಂತಿಂತಾ ವಿದ್ಯೆ ಅಲ್ಲ, ಬಹಳ ಸಾಮಾನ್ಯವಾದ ವಿದ್ಯೆ ಅಲ್ಲ, ಎಲ್ಲರಿಗೂ ಒಲಿಯೋ ವಿದ್ಯೆ ಅಲ್ಲ, ಒಲಿದರೆ ಬಿಡುಬಹುದಾದ ವಿದ್ಯೆ ಅಲ್ಲ. ಕೆಟ್ಟವರ ಕೈಯಲ್ಲಿ ಇದು ಕೆಟ್ಟ ವಿದ್ಯೆ. ನನ್ನಂತಹ ಮುದುಕನ ಕೈಯಲ್ಲಿ ಇದು ಹೊಟ್ಟೆಪಾಡಿನ ವಿದ್ಯೆ..." ಅವನ ಮಾತು ಮುಂದುವರಿಯುತ್ತಿದ್ದಂತೆ ಡೋಲಿನವನು ದುಡ್ಡಿನ ತಟ್ಟೆಯೊಂದಿಗೆ ಗುಂಪಿನ ಮುಂದೆಲ್ಲ ಸಾಗಿ, ಎಲ್ಲರಿಂದಲ್ಲೂ ದುಡ್ಡು ಸಂಗ್ರಹಿಸಲಾರಂಭಿಸಿದ.

ಕೊನೆಗೂ ಪೀಠಿಕೆಯನ್ನೆಲ್ಲ ಮುಗಿಸಿದ ವೃದ್ಧ ಗುಂಪಿನೆಡೆಗೆ ತಿರುಗಿ,

"ನನ್ನ ವಿದ್ಯೆಯ ಪ್ರದರ್ಶನಕ್ಕೆ ಯಾರಾದರೂ ಒಬ್ಬ ಗಂಡಸರು ಬೇಕು, ಹೆದರಿಕೊಳ್ಳಬೇಡಿ, ನಿಮ್ಮ ಜೀವಕ್ಕೆ ನನ್ನ ಜೀವ ಕಾವಲು, ನಮ್ಮಿಬ್ಬರ ಜೀವಕ್ಕೆ ಮುಚ್ಚಂಜೆ ಆಕಾಶದಲ್ಲಿ ನೆರೆದಿರೋ ದೇವರುಗಳೇ ಕಾವಲು. ಚಾಕುವಿನಿಂದ ಚುಚ್ಚುವುದಿಲ್ಲ, ತುಪಾಕಿಯಿಟ್ಟು ಹಾರಿಸುವುದಿಲ್ಲ. ಏನನ್ನೂ ತಿನ್ನಿಸುವುದಿಲ್ಲ, ಹಾವು ಚೇಳು ಅನ್ನೋ ಭಯಬೇಡ. ಸುಮ್ಮನೆ ದೇವರುಗಳ ಮೇಲೆ ಭಾರ ಹಾಕಿ ಎದ್ದು ಬನ್ನಿ."

ಯಕ್ಷಿಣಿಗಾರ ಅಷ್ಟೊಂದೆಲ್ಲ ಹೇಳಿದುದ್ದಕ್ಕೋ ಏನೋ, ಶುರುವಾಗುತ್ತಿದ್ದ ಭಯದೊಂದಿಗೆ ಎಲ್ಲರೂ ಸುಮ್ಮನೇ ಕುಳಿತೇ ಬಿಟ್ಟರು. ಗುಂಪಿನ ಭಯ ಕಂಡು ಯಕ್ಷಿಣಿಗಾರನ ಮುಖದ ತುಂಬ ಸಂಜೆಯ ಕೆಂಪು ಬೆಳಕಿಗೆ ನಗುವರಳಿತು.

"ಯಾರಾದ್ರೂ ಒಬ್ಬರು ಬನ್ನಿ. ಧೈರ್ಯಮಾಡಿ..." ಗುಂಪಿನಿಂದ ಮಧ್ಯವಯಸ್ಕನೊಬ್ಬ ಎದ್ದು ನಿಂತ. ಅವನ ಜೊತೆಗೆ ಕುಳಿತವರೆಲ್ಲ ಶಿಳ್ಳೆ ಹಾಕಿದರು. ಮುದುಕನೂ ಸೇರಿದಂತೆ ಎಲ್ಲರೂ ಚಪ್ಪಾಳೆ ತಟ್ಟಿದರು. ಡೋಲಿನ ಬಡಿತ ಜೋರಾಯಿತು. ಎದ್ದು ನಿಂತ ಆ ವ್ಯಕ್ತಿ ಮೆಲ್ಲನೆ ಬಯಲಿನ ಮಧ್ಯಕ್ಕೆ ಆ ವೃದ್ಧನ ಸಮೀಪಕ್ಕೆ ಬಂದು ನಿಂತ. ವೃದ್ಧ ಆತನ ಹೆಸರು ಕೇಳಿದ. ನಂತರ ಜನರೆಡೆಗೆ ತಿರುಗಿ, "ಧೈರ್ಯಮಾಡಿ ಎದ್ದು ಬಂದ ನಾರಾಣಪ್ಪನಿಗೆ ಇನ್ನೊಂದು ಸುತ್ತು ಚಪ್ಪಾಳೆ!" ಎಂದ. ಅವನ ಮಾತಿಗೆ ಮತ್ತೆ ಚಪ್ಪಾಳೆ ಮತ್ತು ಡೋಲಿನ ದನಿ ತಾರಕಕ್ಕೇರಿದವು.

ಎಲ್ಲ ನಿಶಬ್ದವಾದ ಮೇಲೆ ನಾರಾಣಪ್ಪನನ್ನು ಬೆಂಚಿನ ಮೇಲೆ ಕೂರಿಸಿ ಯಕ್ಷಿಣಿಗಾರ ತನ್ನ ಜೇಬಿನಿಂದ ಸಣ್ಣ ಸರಪಳಿಯ ತುದಿಗೆ ಕಟ್ಟಿದ್ದ ಫಳ–ಫಳ ಹೊಳೆಯುವ ಕೆಂಪುಕಲ್ಲಿನ ಲೋಲಕವನ್ನು ತೆಗೆದ. ಎಲ್ಲರೂ ಮಂತ್ರಮುಗ್ಧವಾಗಿ ನೋಡುತ್ತಿರುವಾಗಲೇ ಅದನ್ನು ಕುಳಿತ ನಾರಾಣಪ್ಪನ ಕಣ್ಣುಗಳ ಮುಂದೆ ತೂಗಾಡಿಸುತ್ತ ಮಾತನಾಡಲಾರಂಭಿಸಿದ.

"ಈ ಕೆಂಪು ಕಲ್ಲನ್ನೇ ನೋಡ್ತಾ ಇರು ನಾರಾಣಪ್ಪ, ಮತ್ತೆಲ್ಲೂ ನೋಡಬೇಡ..." ಅಷ್ಟರಲ್ಲಿ ಯಾರೋ ಕುಳಿತಿದ್ದ ನಾರಾಣಪ್ಪನೆಡೆಗೆ ಒಂದಷ್ಟು ಬೆಂಡು ಬತ್ತಾಸು ತೂರಿದರು. ನಾರಾಣಪ್ಪ ಮಿಡುಕಿ ಬಿದ್ದು ಜನರೆಡೆಗೆ ನೋಡಿದ, ಗುಂಪು ಗಹಗಹಿಸಿ ನಕ್ಕಿತು.

"ಯಾರಪ್ಪಾ ಬೆಂಡು ಬತ್ತಾಸು ಎಸೆದಿದ್ದು?" ಮೋಡಿಗಾರನ ಮಾತಿಗೆ ಪುಸಪುಸನೆ ನಕ್ಕರು ಮಂದಿ. ಯಾರೂ ಉತ್ತರಿಸದಿದ್ದುದ್ದನ್ನು ಕಂಡು ಯಕ್ಷಿಣಿಗಾರನ ಮುಖ–ಮಾತು ನಾಟಕೀಯವಾಗಿ ಬದಲಾಯಿತು. ಅವನು ಹೆದರಿಸುವವನಂತೆ ಮುಖಮಾಡಿಕೊಂಡು ಹೀಯಾಳಿಸುವ ಧ್ವನಿಯಲ್ಲಿ ಹೇಳಿದ, "ಅಷ್ಟೊಂದ್ ಧೈರ್ಯವಿದ್ದವರು ತಾವೇ ಬರಬಹುದಲ್ಲ ಇಲ್ಲಿಗೆ? ಅದನ್ನು ಬಿಟ್ಟು, ಏನೋ ಯಜಮಾನಪ್ಪ ಬಂದು ಕೂತಿದಾರೆ ಅಂದ್ರೆ ಅವರ ಧೈರ್ಯಕ್ಕೆ ಚಪ್ಪಾಳೆ ತಟ್ಟಿ ಖುಷಿ ಮಾಡೋದು ಬಿಟ್ಟು ಸುಮ್ನೆ ಗುಂಪಿನಲ್ಲಿ ಕೂತ್ಕೊಂಡು ಬೆಂಡು ಬತ್ತಾಸು ಎಸಿಯೋದು ಎಂಥಾ ಧೈರ್ಯ?" ಅವನ ಮಾತು ತಮಗೇ ತಟ್ಟಿತೇನೋ ಎಂಬಂತೆ ಜನರೆಲ್ಲ ನಗು ನಿಲ್ಲಿಸಿ, ಗುಸುಗುಸು ಮಾಡಲಾರಂಭಿಸಿದರು. ಆಗ ಗುಂಪಿನೊಳಗಿನಿಂದ ತಳವಾರರ ರಾಮಣ್ಣ ಎದ್ದು ನಿಂತ; ಬೆಂಡು ಬತ್ತಾಸು ತಾನೇ ಎಸೆದಿದ್ದು ಎಂಬಂತೆ.

"ಬನ್ನಿ ಸ್ವಾಮಿ, ನೀವೇ ಬನ್ನಿ." ಎಂದು ಅವನನ್ನು ಆಹ್ವಾನಿಸಿದ ಯಕ್ಷಿಣಿಗಾರ ಬೆಂಚಿನ ಮೇಲೆ ಕುಳಿತಿದ್ದವನನ್ನು ಎಬ್ಬಿಸಿ ಕಳಿಸಿದ. ತಳವಾರರ ರಾಮಣ್ಣ ಬೆಂಚಿನ ಬಳಿಗೆ ಬಂದು ನಿಂತಾಗ ಗುಂಪಿನಿಂದ ಮತ್ತೊಂದು ಸುತ್ತಿನ ಚಪ್ಪಾಳೆ, ಶಿಳ್ಳೆ, ಕೇಕೆಗಳ ಸ್ವಾಗತ ದೊರಕಿತು.

"ಬಾ ರಾಜಾ, ಬಂದು ಇಲ್ಲಿ ಕೂತ್ಕೋ!" ವಯಸ್ಸಿನಲ್ಲಿ ಅವನಿಗಿಂತ ಹಿರಿಯನಾಗಿದ್ದ ಯಕ್ಷಿಣಿಗಾರನ ಮಾತಿನಂತೆ ರಾಮಣ್ಣ ಭಂಡಧೈರ್ಯದಿಂದ ಕಿರುನಗುತ್ತ ಬಂದು ಬೆಂಚಿನ ಮೇಲೆ ಕುಳಿತ.

"ನಿನ್ನ ಹೆಸರೇನು?"

"ರಾಮಣ್ಣ"

ಹೆಚ್ಚಿನ ಪೀಠಿಕೆಯಿಲ್ಲದೇ ಯಕ್ಷಿಣಿಗಾರ, ನೇರವಾಗಿ ಕುಳಿತ ರಾಮಣ್ಣನ ಮುಖದ ಮುಂದೆ ಸಣ್ಣ ಸರಪಳಿಯ ತುದಿಗೆ ಕಟ್ಟಿದ್ದ ಫಳ–ಫಳ ಹೊಳೆಯುವ ಕೆಂಪುಕಲ್ಲಿನ ಲೋಲಕವನ್ನು ಅಲುಗಾಡಿಸುತ್ತ ಅವನಿಗೆ ಆದೇಶಗಳನ್ನು ಕೊಡಲಾರಂಭಿಸಿದ.

"ಬೇರೆ ಎಲ್ಲೂ ನೋಡಬೇಡ, ಈ ಕೆಂಪು ಕಲ್ಲನ್ನು ಮಾತ್ರ ನೋಡು, ಬೇರೆಯದನ್ನೆಲ್ಲ ಮರೆತು ಬಿಡು, ಕಣ್ಣು ಅತ್ತಿತ್ತ ಹಾಯಿಸಬೇಡ, ಕೆಂಪು ಕಲ್ಲಿನಿಂದ ದೃಷ್ಟಿ ಸರಿಸಬೇಡ. ಅದನ್ನೇ ನೋಡ್ತಾ ಇರು, ಸಮಾಧಾನವಾಗಿರು... ಮೈ ಹಗುರಾಗ್ತಿದೆ ನಿನಗೆ. ನಿದ್ದೆ ಬರ್ತಿದೆ, ತಡೆಯಲಾರದಷ್ಟು ನಿದ್ದೆ ಬರ್ತಿದೆ, ನಿನ್ನ ಕಣ್ಣುಗಳು ಮುಚ್ಕೊಳ್ತಿವೆ, ನೀನು ನಿದ್ದೆ ಹೋಗ್ತಾ ಇದೀಯ. ನನ್ನ ಮಾತು ಬಿಟ್ಟು ಬೇರೆ ಯಾವ ಶಬ್ದವೂ ಕೇಳಿಸ್ತಿಲ್ಲ ನಿನಗೆ..."

ಮೊದಮೊದಲು ಅಸಡ್ಡೆಯಿಂದೆಂಬಂತೆ ಕಿರುನಗುವಿನಲ್ಲೇ ಯಕ್ಷಿಣಿಗಾರನ ಆದೇಶಗಳನ್ನು ಪಾಲಿಸುತ್ತಿದ್ದ ರಾಮಣ್ಣ ಮೆಲ್ಲನೆ ಶಾಂತನಾದ, ಕೆಂಪುಕಲ್ಲಿನ ಲೋಲಕವನ್ನು ನೋಡುತ್ತಿದ್ದ ಅವನ ಕಣ್ಣುಗಳು ಮುಚ್ಚಿಕೊಂಡವು. ಅವನು ನಿಜವಾಗಿಯೂ ನಿದ್ದೆಯೊಳಕ್ಕೆ ಜಾರಿದ.

"ರಾಮಣ್ಣಾ, ನಿನಗೆ ನನ್ನ ಮಾತು ಮಾತ್ರ ಕೇಳಿಸ್ತಾ ಇದೆ. ಅದನ್ನು ಬಿಟ್ಟು ಬೇರೆ ಏನೂ ಕೇಳಿಸ್ತಿಲ್ಲ. ಇನ್ನು ಮುಂದೆ ನಾನು ಹೇಳಿದ್ದಷ್ಟೇ ಕೇಳ್ತೀಯ ನೀನು. ಬೇರೆ ಯಾರ ಮಾತೂ ಕೇಳೋಲ್ಲ. ನಾನು ಎದ್ದೇಳು ಅಂದ ಕೂಡಲೇ ಎಚ್ಚರಾಗ್ತೀಯ" ಎನ್ನುತ್ತ ಯಕ್ಷಿಣಿಗಾರ ಪರೀಕ್ಷಿಸಲೆಂಬಂತೆ "ಎದ್ದೇಳು" ಅಂದ. ರಾಮಣ್ಣ ಫಕ್ಕನೆ ಕಣ್ಣು ತೆರೆದು ಎಲ್ಲರನ್ನು ನೋಡಿದ. ಜನರೆಲ್ಲ ಅಚ್ಚರಿಯಿಂದ ಮೌನವಾಗಿ ಅವನನ್ನೇ ನೋಡಿದರು.

ರಾಮಣ್ಣನನ್ನು ಮತ್ತೆ ಸಮ್ಮೋಹನಕ್ಕೆ ಒಳಪಡಿಸಿದ ಯಕ್ಷಿಣಿಗಾರ ಅವನನ್ನು ನೇರವಾಗಿ ಉದ್ದಕ್ಕೆ ಬೆಂಚಿನ ಮೇಲೆ ಮಲಗಿಸಿದ. ನಂತರ ನೆರೆದಿದ್ದ ಜನರೆಡೆಗೆ ತಿರುಗಿ ಮಾತನಾಡಲಾರಂಭಿಸಿದ. ತಾನು ಈಗ ಮಾಡಲಿರುವುದು ತುಂಬಾ ವಿರಳವಾದ ಸಮ್ಮೋಹಿನಿ ಪ್ರದರ್ಶನವೆಂದೂ ತಾನು ಮಾಡಿದ್ದುದನ್ನು ಯಾರೂ ಸುಮ್ಮನೆ ತಮಾಷೆಗಾಗಲೀ ಪ್ರಯತ್ನಿಸಬಾರದೆಂದೂ ಎಚ್ಚರಿಸಿದ ನಂತರ ಬೆಂಚಿನ ಮೇಲೆ ಮಲಗಿದ್ದ ರಾಮಣ್ಣನೆಡೆಗೆ ತಿರುಗಿ ನುಡಿದ.

"ರಾಮಣ್ಣ. ನಿನ್ನ ದೇಹ ಹಗುರವಾಗ್ತಿದೆ. ಮೆಲ್ಲಮೆಲ್ಲನೆ ಅದು ತೂಕ ಕಳ್ಕೊಳ್ತಿದೆ. ಹಾಳೆಯಷ್ಟು ಹಗುರವಾಗ್ತಾ ಇದೀಯ... ಈಗ ನೀನು ತುಂಬಾನೇ ಹಗುರ ಆಗಿದೀಯ. ಮೆಲ್ಲನೆ ನೀನು ಗಾಳಿಯಲ್ಲಿ ಮೇಲಕ್ಕೇರ್ತೀಯ. ತುಂಬ ಹಗುರವಾಗಿರೋದರಿಂದ ನಿನಗೆ ಅಷ್ಟೇನು ಕಷ್ಟವಾಗ್ತಿಲ್ಲ. ಸುಮ್ಮನೆ ಗಾಳಿಯಲ್ಲಿ ತೇಲ್ಕೊಂಡು ಮೇಲಕ್ಕೆ ಏರ್ತೀಯ"

ಬೆಂಚಿನ ಮೇಲೆ ಉದ್ದಕ್ಕೆ ಮಲಗಿದ್ದ ರಾಮಣ್ಣನ ದೇಹ, ನೆರೆದಿದ್ದ ಜನಸಮೂಹ ಬೆಚ್ಚಿ ಬೆರಗಾಗುವಂತೆ ಒಂದೇ ಇಂಚಿನಷ್ಟು ಬೆಂಚನ್ನು ಬಿಟ್ಟು ಮೇಲಕ್ಕೇರಿತು. ನೆರೆದಿದ್ದವರೆಲ್ಲ ತಣ್ಣಗಾದರು, ಹೆಂಗಸರೆಲ್ಲ ಬೆದರಿ, ಬಾಯಿಗೆ ಸೀರೆ ಸೆರಗಿನ ಉಂಡೆಮಾಡಿಕೊಂಡು ಉಸಿರು ಬಿಗಿಹಿಡಿದುಕೊಂಡರು.

"...ರಾಮಣ್ಣಾ, ನಿನಗೆ ತುಂಬಾ ಸುಲಭದ ಕೆಲಸ ಇದು. ನಿಲ್ಲಬೇಡ, ಸುಮ್ಮನೆ ಇಷ್ಟೇ ವೇಗದಲ್ಲಿ ಮೇಲಕ್ಕೆ ಏರು. ಏರುತ್ತಾ ಹೋಗು. ನಾನು ಹೇಳುವವರೆಗೂ ನೀನು ನಿಲ್ಲಿಸಬೇಡ."

ರಾಮಣ್ಣನ ದೇಹ ಇಂಚಿಂಚಾಗಿ, ಬೆಂಚಿನಿಂದ ಒಂದಡಿಯಷ್ಟು ಮೇಲಕ್ಕೇರಿತು. ಅವನು ಸೊಂಟಕ್ಕೆ ಕಟ್ಟಿಕೊಂಡಿದ್ದ ಪಂಚೆ ಅವನ ಬೆನ್ನಿಗೆ ಜೋತುಬಿತ್ತು. ಅದನ್ನು ಸರಿಯಾಗಿ ಸುತ್ತಿದ ಯಕ್ಷಿಣಿಗಾರ.

"ಹೋಗು ರಾಮಣ್ಣ, ನಿನಗೆ ಹೆದರಿಕೆ ಅನ್ನೋದೇ ಇಲ್ಲ. ಹಕ್ಕಿ ನೀನು, ಮೆಲ್ಲಮೆಲ್ಲನೆ ಮೇಲಕ್ಕೆ ಹೋಗ್ತಾ ಇರು..."

ಇಡೀ ಜನಸಮೂಹ ರೆಪ್ಪೆ ಕೂಡ ಮಿಟುಕಿಸದೇ ಯಾವುದೋ ಚಿತ್ರಪಟಲದ ಪಾತ್ರಗಳಂತೆ ಕಣ್ಣುಕೀಲಿಸಿ ಬೆಂಚಿನಿಂದ ಮಲಗಿದ್ದಂತೆಯೇ ಮೆಲ್ಲಮೆಲ್ಲಗೆ ಗಾಳಿಯಲ್ಲಿ ಮೇಲಕ್ಕೇರುತ್ತಿದ್ದ ರಾಮಣ್ಣನನ್ನೇ ನೋಡಲಾರಂಭಿಸಿದರು. ಅವನ ಆರೋಹಣದಂತೆಯೇ ಅವರೆಲ್ಲರ ಎದೆಬಡಿತವೂ ಹೆಚ್ಚಾಗುತ್ತಾ ಹೋಯಿತು.

ಸ್ತಂಭೀಭೂತರಾಗಿ ಕುಳಿತಿದ್ದ ಜನರೆಡೆಗೆ ತಿರುಗಿದ ವೃದ್ಧ ಯಕ್ಷಿಣಿಗಾರ ಏನನ್ನೋ ಹೇಳಹೊರಟು ಇದ್ದಕ್ಕಿದ್ದಂತೆಯೇ ತತ್ತರಿಸಿ ನಿಂತ. ಅವನ ಮುಖ ನೋವಿನಿಂದ ಗಂಟಿಕ್ಕಿಕೊಂಡಿತು. ಜನಕ್ಕೆ ಏನೂ ಅರ್ಥವಾಗಲಿಲ್ಲ. ತೆರೆದ ಬಾಯಿಯಿಂದ ಏನನ್ನೂ ಹೇಳಲಾಗದೇ ನರಳಿಕೆಯ ಶಬ್ದಮಾಡಿದ. ತನ್ನ ಎರಡೂ ಕೈಗಳಿಂದ ಎದೆಯನ್ನು ಗಟ್ಟಿಯಾಗಿ ಹಿಸುಕಿಕೊಳ್ಳುತ್ತ, ದುಸುಮುಸು ಉಸಿರು ಬಿಡುತ್ತ, ತಾರಾಡುತ್ತ ಬೀಳಲಾರಂಭಿಸಿದ ಅವನನ್ನು ಡೋಲಿನವನು ಓಡಿಬಂದು ಹಿಡಿದುಕೊಂಡ.

"ಯಾರಾದ್ರೂ ಡಾಕ್ಟ್ರು ಇದಾರಾ ಇಲ್ಲಿ? ಈ ಊರಲ್ಲಿ?" ಡೋಲಿನವನು ಕಿರುಚಿಕೊಳ್ಳುತ್ತಿದ್ದಂತೆಯೇ ನೋವಿನಿಂದ ಕಿವಿಚಿಕೊಳ್ಳುತ್ತಿದ್ದ ಯಕ್ಷಿಣಿಗಾರನ ಮುಖ ಎಲ್ಲ ಕಷ್ಟಗಳನ್ನು ದಾಟಿದಂತೆ ಪ್ರಸನ್ನವಾಯಿತು, ಕಣ್ಣ ಪಾಪೆಗಳು ಹಣೆಯೆಡೆಗೆ ಸರಿದು ಊರ್ಧ್ವಮುಖಿಯಾದವು, ಗಂಟ್ಟಿಕ್ಕಿದ್ದ ಮುಖದ ಮುದುರುಗಳೆಲ್ಲ ಸಡಿಲವಾಗಿ, ತುಟಿ ಒಂದೆಡೆಗೆ ವಕ್ರವಾಯಿತು, ಅವನ ದೇಹ ಸಣ್ಣಗೆ ಅದುರಿ ಸ್ಥಬ್ದವಾಯಿತು. ತನ್ನ ಕೈಗಳೊಳಕ್ಕೆ ಕುಸಿದುಬಿದ್ದ ಯಕ್ಷಿಣಿಗಾರನನ್ನು ನೋಡುತ್ತ ಡೋಲಿನವನು ಜೋರಾಗಿ ಕಿರುಚಿದ. ಆಗ ಜನಕ್ಕೆ ನಿಜವಾಗಿಯೂ ಏನೋ ಎಡವಟ್ಟಾಗಿದೆ ಅಂತ ಗೊತ್ತಾಯಿತು, ಗುಂಪಿನಲ್ಲಿ ಕೋಲಾಹಲ ಉಂಟಾಯಿತು.

ಆದರೆ ಡೋಲಿನವನ ಕೂಗನ್ನೂ ಮೀರಿ ಕುಳಿತಿದ್ದ ಹೆಂಗಸರ ಗುಂಪಿನೊಳಗಿನಿಂದ ಚೀತ್ಕಾರವೊಂದು ಹೊಮ್ಮಿತು. "ಅಯ್ಯೋ ಅಲ್ನೋಡಿ!" ಎಲ್ಲರೂ ಬೆರಗಾಗಿ ಅತ್ತ ನೋಡಿದರು. ಯಕ್ಷಿಣಿಗಾರನ ಕೊನೆಯ ಆದೇಶದಂತೆ ಮೇಲೇರುತ್ತಿದ್ದ ರಾಮಣ್ಣ ಆಗಲೇ ಬೆಂಚನ್ನು ಬಿಟ್ಟು ಐದಡಿಯಷ್ಟು ಮೇಲಕ್ಕೇರಿದ್ದ ಮತ್ತು ಸುತ್ತ ಮುತ್ತಲಿನ ಆಗುಹೋಗುಗಳಿಗೂ ತನಗೂ ಸಂಬಂಧವೇ ಇಲ್ಲದಂತೆ ಇನ್ನೂ ಏರುತ್ತಲೇ ಇದ್ದ.

ಹೆಂಗಸರೆಲ್ಲ ಚೀರಿದರು, ಡೋಲಿನವನ ಸಮೇತವಾಗಿ ಎಲ್ಲರೂ ಕಿರುಚಿದರು, "ರಾಮಣ್ಣಾ, ಎದೇಳೋ" "ಎದ್ದೇಳು, ಎದ್ದೇಳು", "ರಾಮಣ್ಣ ನಿಲ್ಲೋ, ಎಚ್ಚರಾಗೋ" ಗುಂಪಿನಲ್ಲಿದ್ದ ಗಂಡಸರು ಓಡಿಬಂದು ಅವನನ್ನು ಹಿಡಿಯಲು ಯತ್ನಿಸಿದರು, ಜಿಗಿದು ಅವನನ್ನು ಎಳೆಯಲು ಪ್ರಯತ್ನಿಸಿದರು. "ಇಲ್ಲ. ಮಾಸ್ಟರ್ ಮಾತಿಗಲ್ಲದೇ ಅವರು ಬೇರೆಯವರ ಮಾತಿಗೆ ಎಚ್ಚರಾಗೋಲ್ಲ" ಡೋಲಿನವನ ಮಾತಿಗೆ ಯಾರೋ ಸರಿಯಾಗಿ ಅವನ ಕಪಾಳಕ್ಕೆ ಬಿಗಿದರು. ಎಷ್ಟೇ ಜಿಗಿದರೂ ಅವರೆಲ್ಲರಿಗೂ ರಾಮಣ್ಣನ ಬಟ್ಟೆಯ ಸ್ಪರ್ಶವಾಯಿತೇ ವಿನಃ ಅವನನ್ನು ಹಿಡಿಯಲಾಗಲಿಲ್ಲ. ಅವನು ಸುಮ್ಮನೇ ಒಂದೇ ವೇಗದಲ್ಲಿ ಮೆಲ್ಲಗೆ ಏರುತ್ತಲೇ ಹೋದ. ಯಾವನೋ ಸಣ್ಣ ಹುಡುಗ ರಾಮಣ್ಣನ ಹೆಂಡತಿಗೆ ಹೇಳಿಬರಲು ಓಡಿದ. ಯಾರೋ ಓಡಿ ಹೋಗಿ ಬಾವಿ ಹಗ್ಗ ತಂದರು. ಹಗ್ಗವನ್ನು ಕುಣಿಕೆ ಮಾಡಿ, ಆಗಲೇ ಹತ್ತು ಅಡಿಯಷ್ಟು ಮೇಲಕ್ಕೇರಿದ್ದ–ಇನ್ನೂ ಏರುತ್ತಲಿದ್ದ ರಾಮಣ್ಣನತ್ತ ಎಸೆದರು. ಏನೇ ಆದರೂ ಹಗ್ಗದಿಂದಲೂ ಹಿಡಿಯಲಾಗಲಿಲ್ಲ. ಅಷ್ಟರಲ್ಲಿ ಕಂಕುಳಿನ ಕೂಸಿನೊಂದಿಗೆ ಓಡಿಬಂದ ರಾಮಣ್ಣನ ಹೆಂಡತಿ ಅದನ್ನು ನೋಡಲಾಗದೇ ಕುಸಿದುಬಿದ್ದಳು. ಕೆಲವು ಹೆಂಗಸರು ಅವಳ ಉಪಚಾರಕ್ಕೆ ಧಾವಿಸಿದರು. ಇನ್ನುಳಿದ ಕೆಲವು ಹೆಂಗಸರೂ ಅವರ ಮಡಿಲಿನೊಳಗಿದ್ದ ಮಕ್ಕಳೂ ಬೆದರಿ ಅಳಲಾರಂಭಿಸಿದರು. ಇದರೊಳಗೆಲ್ಲ ಸತ್ತು ಬಿದ್ದಿದ್ದ ಯಕ್ಷಿಣಿಗಾರನನ್ನೂ ಅವನ ಸಾಥಿ–ಡೋಲಿನವನನ್ನು ಕೇಳುವವರೇ ಇರಲಿಲ್ಲ. ಒಣಗಿದ ಕಣ್ಣೀರಿನೊಂದಿಗೆ ಅಯೋಮಯನಾಗಿ ಕುಳಿತ್ತಿದ್ದ ಡೋಲಿನವನು ಮತ್ತೊಮ್ಮೆ ಬಿಕ್ಕಿಬಿಕ್ಕಿ ಅಳಲಾರಂಭಿಸಿದ. ಹಿರಿಯರೆಲ್ಲ ಸಣ್ಣ ಮಕ್ಕಳ ಮುಖ ಮುಚ್ಚಿಕೊಂಡರು. ಇನ್ನೂ ಕೆಲವರು ಅಲ್ಲೇ ನೋಡುತ್ತ ನಿಂತಿದ್ದ ಹುಡುಗರನ್ನು ಗದರಿಸಿ ಓಡಿಸಿದರು. ಆದರೆ ಬಯಲಿನಿಂದಾಚೆಗೂ ಸಣ್ಣ ಗಲ್ಲಿಗಳ ಮನೆಯ ಅಂಗಳದಿಂದಲೂ ಕಾಣುವಷ್ಟು ಎತ್ತರಕ್ಕೆ ಏರಿದ್ದ ರಾಮಣ್ಣನನ್ನು ಕಂಡು ಮುಸ್ಸಂಜೆಯಲ್ಲಿ ಜಗುಲಿಯ ಮೇಲೆ ಕುಳಿತಿದ್ದವರೆಲ್ಲ ಎದ್ದು ನಿಂತು, ಸೋಜಿಗಗೊಂಡು ಭಯಭೀತರಾಗಿ ನೋಡಿದರು. ಸಂಪೂರ್ಣವಾಗಿ ಸೂರ್ಯಾಸ್ತವಾಯಿತು. ಅವರೆಲ್ಲರೂ ನೋಡುತ್ತಿದ್ದಂತೆಯೇ ರಾಮಣ್ಣನ ಆಕೃತಿ ದೊಡ್ಡ ಹದ್ದಿನ ಗಾತ್ರದಿಂದ ಸಣ್ಣ ಹಕ್ಕಿಯಷ್ಟು ಸಣ್ಣಗಾಗಿ, ಕೊನೆಗೆ ಸುಟ್ಟ ತೆಂಗಿನ ಗರಿಯ ಬೂದಿಯ ತುಣುಕಿನಷ್ಟು ಸಣ್ಣಗಾಗಿ, ಇನ್ನೂ ಸಣ್ಣಗಾಗಿ ಕೊನೆಗೆ ಬೂದಿಯ ಬಣ್ಣದಿಂದ ಕಪ್ಪು ಕತ್ತಲಿಗೆ ತಿರುಗುತ್ತಿದ್ದ ಆಕಾಶದಲ್ಲಿ ಮರೆಯಾಗಿ ಹೋಯಿತು.

* * *

**(ಇದು ನನ್ನ ಮೆಚ್ಚಿನ ಲೇಖಕ–ಸಂಪಾದಕ–ನಿರ್ದೇಶಕ ಅಲ್ಫ್ರೆಡ್ ಹಿಚ್‌ಕಾಕ್‌ನ 'STORIES NOT FOR THE NERVOUS' ಕಥಾ ಸಂಕಲನದ 'LEVITATION' ಎಂಬ ಕತೆಯ ಭಾವಾನುವಾದ)**

## ಹ್ಯಾವ್ ಎ ನೈಸ್ ಡೇ

ಶಿವಕುಮಾರ ಕೆ. ಎಸ್. *ks_shivu@yahoo.com*